







ಮುಖ ಮಾಡಿರುವ ಗೋಡೆ ತುಂಬ ದಪ್ಪವಾಗಿದೆ. ಅದರ ಮೇಲೆ ಏರಿ ಸಮುದ್ರ ವೀಕ್ಷಣೆ ಮಾಡಬಹುದು. ಈ ಗೋಡೆಗೆ ಹತ್ತಲು ಸುಂದರ ಮತ್ತು ವಿಶಾಲವಾದ ಮೆಟ್ಟಿಲುಗಳಿವೆ. ಕೋಟೆಯ ಆವರಣದಲ್ಲಿ, ನೆಲಮಾಳಿಗೆಯಲ್ಲಿ ನಿರ್ಮಿಸಿರುವ ಜೈಲುಗಳು, ಅಲ್ಲಿ ಇಟ್ಟಿರುವ ಪಿರಂಗಿಗಳು ಹಾಗೂ ಕೋಟೆಯೊಳಗಿನ ಸುಂದರ ಉದ್ಯಾನವನ ಮನಸೆಳೆಯುತ್ತವೆ.

ಕೋಟೆಯ ಮೇಲ್ಭಾಗದಲ್ಲಿ ನಿಂತು ನೋಡಿದರೆ ಒಂದೆಡೆ ಅರಬ್ಬಿ ಸಮುದ್ರ, ಮತ್ತೊಂದು ಕಡೆ ನೈಸರ್ಗಿಕವಾಗಿರುವ ಕೊಲ್ಲಿ ಪ್ರದೇಶ. ಈ ಕೊಲ್ಲಿಯಲ್ಲಿ ಮೀನುಗಾರಿಕೆಯ ದೋಣಿಗಳು ನಿಲ್ಲಲು ವ್ಯವಸ್ಥೆ ಮಾಡಲಾಗಿದೆ. ಈ ಕೋಟೆ ಕಣ್ಣೂರು ರೈಲ್ವೆ ನಿಲ್ದಾಣದಿಂದ ಕೇವಲ ಮೂರು ಕಿ.ಮೀ. ದೂರದಲ್ಲಿದ್ದು ವಾಹನ ಸೌಲಭ್ಯಗಳಿವೆ. ಬೆಂಗಳೂರು ಮತ್ತು ಕಣ್ಣೂರಿನ ನಡುವೆ ನೇರ ರೈಲು ಸಂಪರ್ಕವೂ ಇದೆ.